RegdNo B G 153 Sn (105) 2 3—6—1965

# ಸತ್ಯವಾದಿ

48th Year
Satyavadi
DAILY
MYSORE 4

ಸಂಪಾದಕರು — ಆರ್ ಸಿಂಪ್ಸೋದರ್ ಎಂ ಎ ಶುಬ್ಬಣ್ಣಾಚಾರ್ಯರು ಸಂಪಾದಕರು — ಧರ್ಮಪ್ರಚಾರವಿಶಾರದ ಎಂ ಎಸ್ ಕೃಷ್ಣಾಚಾರ್ ಬಿಎ

## ಭಾರತ ಕ್ರಿಕೆಟ್ಟಿಗೆ ಧಕ್ಕೆ

★

ನವದೆಹಲಿ— ಈ ಚಳಿಗಾಲದಲ್ಲಿ ಇಂಗ್ಲೀಷು

ನವದೆಹಲಿ— ಅಧಿಕೃತ ಭೇಟಿ ಶಾಸನದ ತಿದ್ದುಪಡಿ ಯೋಜಿಸುವುದರ ಜೊತೆಗೆ ಇಂಗ್ಲೀಷ್ ಮೂಲದ ಎಂಯುವ ಬಗ್ಗೆ ನಿರ್ಣಯ ಕೊಟ್ಟಿದ್ದ ಭಾವನೆಗೂ ನ್ಯಾಯಾಲಯ ಅಕಾರ ಕೊಡುವ ನಿರ್ಣಯವನ್ನು ಕಾಂಗ್ರೆಸ್ಸು ಕಾರ್ಯಕಾರಿ ಸಮಿತಿ ಅನುಮೋದಿಸಿದೆ

ನೆಹರೂ ಹೊ

ಕಾಸ್ಕೊ— 61 ವರ್ಷದ ರಷ್ಯಾ ಮಹಿಳೆ ಸತಿ ಕರೋಬಾವಳು ತಾನು ನೆನೆಹರು ಮತ್ತು ಇಂದಿರಾ ಗಾಂಧಿ ಹೆಸರಿಟ್ಟು ಬೆಳೆಸಿದ ಎಂಟು ಹೂವಿನ ಗಿಡಗಳನ್ನು ಇಲ್ಲಿನ ಭಾರತೀಯ ರಾಯಭಾರಿಯವರಿಗೆ ಕೊಟ್ಟಳು — ನೆಹರೂ ಗಿಡ ಭಿಂಗಾರಿಂದ ಬಣ್ಣದ ಹೂವನ್ನೂ ಇಂದಿರಾ ಗಾಂಧಿ ಗಿಡ ಕೆಂಪು ಕಿತ್ತಳೆ ಬಣ್ಣದ ಹೂವನ್ನೂ ಬಿಡುವುದಾಗಿ ತಿಳಿಸಿದಳು.

ವಿಯಟ್ನಾಂನಲ್ಲಿ

ವಾಷಿಂಗ್ಟನ್— ಅಮೆರಿಕವು ಈ ಯುದ್ಧದಲ್ಲಿ ಹೆಚ್ಚು ಚಟುವಟಿಕೆ ವಹಿಸಿದ ದಕ್ಷಿಣ ವಿಯಟ್ನಾಂಗೆ ಶೀಘ್ರದಲ್ಲೇ ಮತ್ತೆ 25000 ಸೈನ್ಯ ಕಳುಹಿಸುವುದೆಂದು ವರದಿಯಾಗಿದೆ

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾವಕ್ಕ, ಜ್ಯೋತಿರ್ವಿದ್ಯಾನಿಧಿ
ಸಂಪತ್ಕೃಷ್ಣಜೋಯಿಸರಿಂದ

4 ಶುಕ್ರವಾರ ಪಂಚಮಿ ಪೂರ್ಣ

## ಪರಮಾಣು ಶಸ್ತ್ರಾಸ್ತ್ರ ಉಪಯೋಗಕ್ಕೆ ನಿರೋಧ

ಕೈರೊ— ವಿಶ್ವ ಸಮುದಾಯದ ಪರಮಾಣು ಶಸ್ತ್ರಾಸ್ತ್ರ ಹೊಂದಿರುವ ದೇಶಗಳ ಅವನ್ನು ಉಪಯೋಗಿಸದಂತೆ ಪ್ರತಿಬಂಧಿಸಬೇಕೆಂಬ ಕೋರಿಕೆಯನ್ನು ಬರುವ ಅಲ್ಜೀರ್ಸ್ ಸಮ್ಮೇಳನದಲ್ಲಿ ಸಂಯುಕ್ತ ಅರಬ್ ಪ್ರಜಾರಾಜ್ಯ ಸೂಚಿಸುವುದಾಗಿ ತಿಳಿಸಿದೆ.

★

ನಿಶ್ಯಸ್ತ್ರೀಕರಣ

ವಿಶ್ವಸಂಸ್ಥೆ— ರಷ್ಯಾ ಮತ್ತು ಅಮೆರಿಕಾ ನೂಕ್ಲಿಯರು ಮತ್ತು ಥರ್ಮೋನ್ಯೂಕ್ಲಿಯರು ಶಸ್ತ್ರಾಸ್ತ್ರಗಳನ್ನು ಉಪಯೋಗಿಸುವವು; ಆದರೆ ಅವುಗಳ ನಿಯಮಗಳು ಬೇರೆಬೇರೆಯಾಗಿದೆ.

ಡಾಕ್ಟರುಗಳ ರಾಜೀನಾಮೆ

ಪಾಟ್ನಾ— ಕೀಹಾರು ಹೆಲ್ತ್ ಸರ್ವಿಸ್ಸು ಸಂಘದ ತೀರ್ಮಾನದಂತೆ ಸುಮಾರು 1400 ಡಾಕ್ಟರುಗಳು ಸಾಮೂಹಿಕವಾಗಿ ರಾಜೀನಾಮೆ ನಿನ್ನೆ ಸಲ್ಲಿಸಿದರು — ಜುಲೈ 1 ರಿಂದ ಇದು ಸರ್ಕಾರಕ್ಕೆ ಒರೆವುದು

## ಅಡ್ವೊಕೇಟರಿಗೆ ಶಿಕ್ಷೆ ಪ್ರಾಯಂ

ಬೆಂಗಳೂರು— ತಾನು ಡಾ ಹೆಚ್ ವೀರಣ್ಣನವರಿಗೆ ಏಜೆಂಟೆಂದು ಗುಲ್ಬರ್ಗಾ ಪೋಸ್ಟಾಫೀಸಸುಬ್ಯಾಂಕಿನಲ್ಲಿದ್ದ ಅತನ ಹಣವನ್ನು ಪಡೆದ ಅಡ್ವೊಕೇಟು ಅಪರಾಧ ಮೇಲೆ ಪೋರ್ಜರಿ ಮತ್ತು ಮೋಸಕ್ಕಾಗಿ ಮೊಖದ್ದೆಮೆ ನಡೆದು ಮ್ಯಾಜಿಸ್ಟ್ರೇಟರು 2 ವರ್ಷ ಕಠಿಣ ಸಜೆ ಮತ್ತು ರೂ 2 ಸಾವಿರ ಜುಲ್ಮಾನೆ ವಿಧಿಸಿದ್ದರು ; ಸೆಷನ್ಸ್ ಕೋರ್ಟಿನಲ್ಲಿ ಅದು ಖಾಯಂ ಆಗಿದ್ದುದು ಈಗ ಹೈ ಕೋರ್ಟಿನಲ್ಲೂ ಖಾಯಂ ಆಯಿತು.

ಶಾಸಕನಿಗೆ ಜೈಲು

ಅಲಹಾಬಾದು— ಉತ್ತರ ಪ್ರದೇಶದ ಶಾಸನ ಸಭಾ ಸದಸ್ಯ ಕಲ್ಯಾಣಸಿಂಗ್ ಮತ್ತಿಬ್ಬರು ಸಂಕಾರಿ ಅಧಿಕಾರಿ ತನ್ನ ಕರ್ತವ್ಯನಿರ್ವಹಿಸದಂತೆ ಬಂಧಿಸಲು ಪ್ರಯೋಗ ಮಾಡಿದ್ದಕ್ಕಾಗಿ 6 ತಿಂಗಳ ಕಠಿಣ ಸಜೆ ವಿಧಿಸಲಾಗಿದೆ

ವಿದ್ಯಾರ್ಥಿಗಳಿಗೆ ಹಿಂಸೆ

ಲಂಡನ್— ಸಾರವರ ಪ್ರಾಣಕ್ಕೆ ಸಂಚಕಾರ ತಂದಿದ್ದ ಅಪವಾದನೆಗಾಗಿ ಇರಾನಿನಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಹಿಂಸೆ ಕೊಡಲಾಗುತ್ತಿದೆ ಎಂಬ ವಿಷಯ ಪರೀಕ್ಷಿಸುವುದಕ್ಕೆ ಅಲ್ಲಿಗೆ ಹೋಗಲು ತಮಗೆ ಅನುಜ್ಞೆ ಬೇಕೆಂದು ಪಾರ್ಲಿಮೆಂಟಿನ ಕೆಲ ಸದಸ್ಯರು ಮೊನ್ನೆ ಹೇಳಿದರು

★

ಮತ್ತೆ ಮದುವೆಯಾದಳು

ಫೋರ್ಟ್ ಟಿಕ್ಸನ್— ತನಗೆ ಕೊಲೆ ಪಾತಕ ಒಪ್ಪಿಸಿದ ವಿಧವೆ 23 ವರ್ಷದ ಸುಂದರಿ ಮೆರಿನಾ ಎಲೆಕ್ಟ್ರಿಸಿಟಿ ಕಾರ್ಮಿಕ 27 ವರ್ಷದ ಕೆನೆತ್ ಪೋರ್ಟರನ್ನು ವಿವಾಹವಾದಳು

## ಬಹುಮಾನಗಳ ಸುರಿಮಳೆ

ಇಂಡಿಯಾಪೊಲಿಸ್— ಈಚೆಗೆ ಇಲ್ಲಿ ನಡೆದ ಮೋಟಾರು ರೇಸಿನಲ್ಲಿ ವಿಜಯಗೊಂಡ ಬ್ರಿಟನ್ನಿನ ಜಿಂ ಕ್ಲಾರ್ಕ್ 166000 ಡಾಲರು ( ಸುಮಾರು 8 ಲಕ್ಷ ರೂಗಳು ಬಹುಮಾನಧನವಾಗಿ ಪಡೆದನು — ಬಹುಮಾನವಾಗಿ ಒಂದು ಕಾರು 6 ಪಾರಿತೋಷಕಗಳು, ಒಂದು ಗಡಿಯಾರ ಒಂದು ವೆಲ್ಡಿಂಗು ಬ್ರಿಟ್‌ಫಿಟ್, ಕಾರಿನ ಸಲಕರಣೆಗಳು, ಮತ್ತು ಇನ್ನೂ ಅನೇಕ ಬಹುಮಾನಗಳನ್ನು ಪಡೆದನು — ಒಟ್ಟು ಬಹುಮಾನ 628000 ಡಾಲರುಗಳು ( ರೂ 3000000 ) ದೊರೆತಿದೆ.

267 ಸಾವು

ಧನಬಾದು— ಧೋರಿ ಕಲ್ಲಿಜಲು ಗಣಿಯಲ್ಲಿ ಸತ್ತವರು 267 ಎಂದು ಅಧಿಕೃತ ಪ್ರಕಟಣೆ ತಿಳಿಸುತ್ತದೆ

ಮಂತ್ರಿ ರಾಜೀನಾಮೆ

ಟೋಕಿಯೊ— 240 ಜೀವಗಳನ್ನು ಆಹುತಿಯಾಗಿ ತೆಗೆದುಕೊಂಡ ಗಣಿಸ್ಫೋಟಕ್ಕಾಗಿ ಕೈಗಾರಿಕೆ ಮಂತ್ರಿ ಶ್ರೀ ಯೆಸಿಯೊ ಅರ್ಪಿಸಿದ ರಾಜೀನಾಮೆಯನ್ನು ಪ್ರಧಾನಿಗಳು ಸ್ವೀಕರಿಸಿದರು

ಟೈಪುರೈಟರಿಂದ ಸಂಗೀತ

ಲಂಡನ್— ಸಂಗೀತ ಹೊರಡುವ ಟೈಪುರೈಟರನ್ನು 41 ವರ್ಷದ ವನಿತೆಯೊಬ್ಬಳೇ ಪತ್ತೆ ಕಂಡುಹಿಡಿದಿರುವಳು.

ಎಜಿಓ

ಅನಂತಪುರ— ತಾ || 9 ರೊಳಗೆ ತಮ್ಮ ಕಳಿಕೆಗಳು ನೆರವೇರಿದ್ದರೆ ನೇರ ಕಾರ್ಯಾಚರಣೆ ನಡೆಸಲು ಎಜಿಓ ನಿರ್ಧರಿಸಿರುವರು

ಚೀಣಾದೊಡನೆ

ವಾಷಿಂಗ್ಟನ್— ಅಮೇರಿಕವು ಚೀಣದೊಡನೆ ಹೊಂದಿಕೊಳ್ಳಬೇಕೆಂದು ಇತ್ತೆಡೋನೇಷ್ಯಾದಲ್ಲಿ ಭಾರತ ರಾಯಭಾರಿ ಹೂಗಿ ನಿಯುಎಸ್ಸಲ್ಟೈನ ವಾರ್ತಾಲಾಗ್ರೆಸನು ಹೇಳಿದರು

## ಶಾಸ್ತ್ರಧರ್ಮ ಪ್ರಚಾರ ಸಭಾ

**Shastra Dharma Prachar Sabha**

( ನಿನ್ನೆಯದರಿಂದ )

ನಮ್ಮ ಶಾಸ್ತ್ರಗಳಲ್ಲಿ ವೇದಗಳು ಸಾಕ್ಷಾತ್ ಪರಮಾತ್ಮನ ಸ್ವರೂಪವೇ. ಅಗಿದ್ದು ಆದಿಯಾಗಲೀ ಅಂತ್ಯವಾಗಲೀ ಇಲ್ಲದುದು ; ಸ್ಮೃತಿಗಳನ್ನೂ ಇತಿಹಾಸಗಳನ್ನೂ ಪುರಾಣಗಳನ್ನೂ ಆಗಮಗಳನ್ನೂ ಪರಮಾತ್ಮನ ಆಜ್ಞೆಯಂತೆ ನಿಸ್ಪೃಹರಾದ ಮಹರ್ಷಿಗಳು ರಚಿಸಿದ್ದಾರೆ : ಅವರು ಯಾವುದೇ ಸ್ವಾರ್ಥಕ್ಕಾಗಲೀ ಇನ್ನಾವ ರೀತಿಯ ಲೋಭಕ್ಕಾಗಲೀ ವಶರಾದವರಲ್ಲ ; ಕೇವಲ ನಮ್ಮ ಅನುಕೂಲಕ್ಕಾಗಿ ಮಾತ್ರ ರಚಿಸಿದ್ದಾರೆ : ಈಗಿನ ವಿಜ್ಞಾನಿಗಳ ಮಾತನ್ನು ನಂದಿ ಶಾಸ್ತ್ರಗಳನ್ನು ಅಪಹಾಸ್ಯ ಮಾಡುವುದು ಮೂಢತನ ; ಒಬ್ಬ ವಿಜ್ಞಾನಿಯು ಹಿಂದೆ ಹೇಳಿದುದು ಈಗ ಮತ್ತೊಬ್ಬ ವಿಜ್ಞಾನಿಯಿಂದ ತಪ್ಪೆಂದು ಸಾಧಿಸಲ್ಪಡುತ್ತದೆ : ಆದರೆ ಜಗತ್ತು ಉದಯವಾದಾಗಿನಿಂದಲೂ ಇರುವ ಶಾಸ್ತ್ರಗಳು ಅಂದಿಗೂ ಸತ್ಯವಾಗಿದೆ.

( ಮುಂದುವರಿಯುವುದು )

## Help The Gorakshana

"ಗೋರಕ್ಷಣ" ಕ್ಕೆ ಚಂಬಲಿಗರುವಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಖಾಹಾರಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರವಾಸಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ ; 'ಗೋರಕ್ಷಣ' ಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು


ವುಡ್‌ಲಾಂಡ್ ಜನಪ್ರಿಯ 2 ನೇ ವಾರ
ಶಿ ನಿ ಕೆಕ್ಕಿರಿದ ಜನಮಂದಣಿಗೆ ಪ್ರದರ್ಶನ

ಚಿತ್ರಾಕರ್ಷಕ ಈಸ್ಟ್‌ಮನ್ ಕಲರ್ ಚಿತ್ರ ಪ್ರತಿದಿನ 3 ಪ್ರದರ್ಶನಗಳು

ಜಾನ್‌ವರ್ (ಹಿಂದಿ) **Janwar**

ಶಮ್ಮಿ ಕಪೂರ್, ರಾಜಶ್ರೀ, ರಾಜೇಂದ್ರನಾಥ್, ಪ್ರಾಕ್ರಮಹಿಳಾವರು

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಬಬ್ಬಿ ಸೋನಿಲ್

ಆಪೆರಾ— **28—5—65** ರಿಂದ

ಅತ್ಯಮೋಘ ಕನ್ನಡ ಚಿತ್ರರತ್ನ ದಿನ 3 ಆಟಗಳು

ನನ್ನ ಕರ್ತವ್ಯ [ಕನ್ನಡ]

ತಾರಾಗಣ— ಕಲ್ಯಾಣಕುಮಾರ್, ನಾಗೇಂದ್ರರಾವ್, ನರಸಿಂಹರಾಜು, ಚಂದ್ರಬಾಬು, ಸಂಧ್ಯಾ, ಜಯಲಲಿತ

SHAKTI SUDHA

A Superb Tonic



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



Edited, Printed & Published by the Proprietor
Dharma Prachara Nikata M S Krishna Rao
at the Satyavadi Press Chamarajapuram Mysore 4